

ಗೂಡಿನಲ್ಲಿದ್ದ ತಾಯಿಗುರಿಗಳು ಮತ್ತು ಅದರ ಸುತ್ತ ಇರುವ ಬಳಗವನ್ನು ಕಣ್ಣಲ್ಲೇ ಲೆಕ್ಕ ಮಾಡಿದ. ಎಲ್ಲವೂ ಸರಿಯಿತ್ತು. ಹಾಗಾದರೆ ಈ ಪರಮ ಯಾರದು? ಇದು ನಮ್ಮದಂಥೂ ಅಲ್ಲ ಎಂದುಕೊಂಡ! ಅಷ್ಟರಲ್ಲಿ ಹಟ್ಟಿಯ ಮರಿಯಪ್ಪ, ವಟ್ಟಪ್ಪ ಮತ್ತು ಕುಂಟಪ್ಪ ಸಣ್ಣತಿಮ್ಮಯ್ಯನ ಕುರಿಗೂಡಿನ ಮುಂದೆ ಬಂದು ಎಂದಿನಂತೆ ವಿರಾಮವಾಗಿ ಕುಳಿತರು. ಸಣ್ಣತಿಮ್ಮಯ್ಯ ತಮ್ಮದಲ್ಲದ ಪರಮವೊಂದು ಗೂಡಿಗೆ ಬಂದು ಸೇರಿಕೊಂಡಿದೆಯೆಂದು ಅವರಿಗೆ ಮಾತಿನ ನಡುವೆ ಹೇಳಿದ. ಅವರೂ ಕೂಡ ಎದ್ದು ಗೂಡಿನೊಳಗಿದ್ದ ಕುರಿಗಳನ್ನು ನೋಡಿದರು. ಅದು ನಮ್ಮ ಹಟ್ಟಿಯ ಪರಮವಲ್ಲ ಎಂದರು. ಮುಕ್ಕಾಲುವಾಸಿ ಇದು ಅಜ್ಜಪ್ಪನಹಟ್ಟಿ ಈರಪ್ಪನ ಪರಮ ಎಂದು ನಿಶ್ಚಯಿಸಿದರು. ಹೇಗೂ ಅನಾಯಾಸವಾಗಿ ಪರಮವೊಂದು ನಮ್ಮ ಹಟ್ಟಿಗೆ ಬಂದುಬಿಟ್ಟಿದೆ. ಬಾಳೆ ಸುಳಿಯಂತಿರುವ ಅದನ್ನು ಇಲ್ಲೇ ಕೊಯ್ದು ತಿನ್ನಬಹುದಲ್ಲ! ನಮ್ಮನ್ನು ತಡೆಯೋರು ಯಾರು? ಎಂದು ತಮ್ಮಲ್ಲೇ ಯೋಚಿಸಿಕೊಂಡು, ತಾವು ಮಾಡಿಕೊಂಡ ಯೋಜನೆಯನ್ನು ಸಣ್ಣತಿಮ್ಮಯ್ಯನಿಗೂ ಹೇಳಿದರು. ಹಿಂದೆ ಇದೇ ಈರಪ್ಪ ಸಣ್ಣತಿಮ್ಮಯ್ಯನ ಬಿಳಿಕುರಿಯನ್ನು ತಿಂದುಹಾಕಿದ್ದರಿಂದ, ಅದಕ್ಕೆ ಮುಯ್ಯಿಗೆ ಮುಯ್ಯಿ ಎನ್ನುವಂತೆ ಸಣ್ಣತಿಮ್ಮಯ್ಯನೂ ಇದಕ್ಕೆ ಒಪ್ಪುತ್ತಾನೆ ಎನ್ನುವ ನಂಬಿಕೆ ಅವರಿಗಿತ್ತು. ಯಾವುದೋ ಗ್ಯಾನದಲ್ಲಿದ್ದ ಸಣ್ಣತಿಮ್ಮಯ್ಯ ಅವರ ಯೋಜನೆಗೆ ತನ್ನ ಸಮ್ಮತಿಯನ್ನೂ ಸೂಚಿಸಿದ.

ಸಣ್ಣತಿಮ್ಮಯ್ಯ ಹಾಗೆ ಹೇಳಿದ್ದೇ ತಡ, ವಟ್ಟಪ್ಪ 'ಲೇ ಮರಿಯಪ್ಪ, ನಾನು ಹಟ್ಟಿಗೆ ಹೋಗಿ ನನ್ನ ಹೆಂಡ್ರಿಗೆ ಗೊತ್ತಾಗದಂತೆ ಕಾರ ತರುತ್ತೀನಿ. ನೀನು ಹೋಗಿ ನಿಮ್ಮ ಹಟ್ಟಿಯಿಂದ ಯಾರಿಗೂ ಗೊತ್ತಾಗದ ಹಾಗೆ ಒಂದು ಸ್ವಾರೆ, ಅಂಗೆಯಾ ಒಂದು ಸಟ್ಟುಗ ತಗಂಡು ಬಾ. ಲೇ ಕುಂಟಪ್ಪ ನೀನು ಹೋಗಿ ಉಂಬೋಕೆ ಅಡಕೆಪಟ್ಟೆ, ಅಂಗೆಯಾ ಒಂದೆರೆಡು ಒಣಗಿದ ಕೊರಡುನ್ನೂ ತಗಂಡು ಬಾ' ಎಂದು ಹೇಳಿ ಯಾರ ಉತ್ತರಕ್ಕೂ ಕಾಯದೆ ತನ್ನ ಹಟ್ಟಿಗೆ ಹೊರಟ. ಹೊರಡುವ ಮುಂಚೆ ಸಣ್ಣತಿಮ್ಮಯ್ಯನಿಗೆ 'ನೀನು ಚೂರಿ ಮಸೆದುಕೊಂಡಿರು' ಎಂದು ಹೇಳಿ ಹಟ್ಟಿಗೆ ದೌಡಾಯಿಸಿದ.

ಎಲ್ಲರೂ ರೊಪ್ಪಕ್ಕೆ ಬಂದು ತಾವು ಹೊತ್ತ ಜವಾಬ್ದಾರಿಗಳನ್ನು ಚ್ಯುತಿ ಬಾರದಂತೆ ನಿರ್ವಹಿಸಿದ್ದರು. ವಟ್ಟಪ್ಪ ಮಸೆದ ಚೂರಿಯನ್ನು ಹಿಡಿದುಕೊಂಡು ಸಣ್ಣತಿಮ್ಮಯ್ಯನಿಗೆ 'ಹೋಗಿ ಆ ಪರಮ ಹಿಡಿದುಕೊಂಡು ಬಾರೊ ಸಣ್ಣೋನೆ' ಎಂದು ಹೇಳಿದ. ಸಣ್ಣತಿಮ್ಮಯ್ಯ ಕೈಯಲ್ಲಿ ಚೂಡಿ ಹಚ್ಚಿಕೊಂಡು ಗೂಡಿಗೆ ಹೋಗಿ ಪರಮವನ್ನು ಹಿಡಿದುಕೊಂಡು ಹೊರಬಂದ. ಉರಿಯುವ ಚೂಡಿ ಬೆಳಕಲ್ಲಿ ನೋಡಿದರೆ ಸಣ್ಣತಿಮ್ಮಯ್ಯನ ಮುಖ ಗೆಲುವಾಗಿರಲಿಲ್ಲ! ಯಾವುದೋ ನೋವು ಅವನ ಮುಖದ ಮೇಲೆ ಕಾಣುತ್ತಿತ್ತು. ಅವನ ಕೈಯಲ್ಲಿದ್ದ ಪರಮವೂ ಕೂಡ ಒಮ್ಮೆ ತಲೆಯೆತ್ತಿ ಸಣ್ಣತಿಮ್ಮಯ್ಯನನ್ನು ನೋಡಿತು. ಸಣ್ಣತಿಮ್ಮಯ್ಯನೂ